ಹೆಚ್ಚಿನ ಅನುಕೂಲವನ್ನು ದೊರಕಿಸಿಕೊಡಬೇಕು. ಮಲೆನಾಡಿನ ಮೂಲೆ ಭಾಗಿರುವಂಥ ಕೊಪ್ಪಕ್ಕೆ ೬೦-೭೦ ಮೈಲಿ ಸುತ್ತಳತೆಯಿಂದ ಜನ ಅಲ್ಲಿಗೆ ಬರಬೇಕಾಗಿದೆ. ಆದ್ದರಿಂದ ಅತಿಮುಖ್ಯವಾಗಿ, ಆವಶ್ಯಕವಾಗಿ ಕೋರ್ಟ್ ಬೇಕು. ಅದ್ದರಿಂದ ತಾವು ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಈ ಸಂದರ್ಭದಲ್ಲಿ ಮತ್ತೆ ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸೂಚನೆಯನ್ನು ಪುನಃ ನಾವು ಜ್ಞಾಪನ ಪತ್ರದ ಮೂಲಕ ಉಚ್ಚನ್ಯಾಯಾಲಯಕ್ಕೆ ತಿಳಿಸುತ್ತೇವೆ.

ನ್ಯಾಯಬೆಲೆ ಅಂಗಡಿಗಳ ಬಗ್ಗೆ

೧೧೬೧. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಬೆಂಗಳೂರು ನಗರದ ರಾಜಾಜಿನಗರದಲ್ಲಿ ದಿನನಿತ್ಯ ಪಡಿತರ ವಸ್ತುಗಳನ್ನು ವಿತರಣೆ ಮಾಡುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಈ ಪೈಕಿ ಸಹಕಾರ ಸಂಘಗಳ ಅಂಗಡಿಗಳೆಷ್ಟು ? ಹಾಗೂ ಖಾಸಗಿಯವರ ಅಂಗಡಿಗಳೆಷ್ಟು?

ಇ) ಈ ಖಾಸಗಿ ನ್ಯಾಯಬೆಲೆ ಅಂಗಡಿಯವರು ಹಾಗೂ ಸಹಕಾರ ಸಂಘಗಳು ನಡೆಸುತ್ತಿರುವ ನ್ಯಾಯಬೆಲೆ ಅಂಗಡಿಯವರು ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲದಿರುವುದರ ಬಗ್ಗೆ ದೂರುಗಳೇನಾದರು ಬಂದಿದೆಯೇ ?

ಈ) ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಆಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೧೫೪.

ಆ) ೩೧ ಸಹಕಾರ ಸಂಘ
೨೪ ಕೆ.ಎಫ್.ಸಿ.ಎಸ್.ಸಿ.
೯೯ ಖಾಸಗಿಯವರು.

ಇ) ಹೌದು.

ಈ) ಆರೋಪಗಳ ತನಿಖೆಯ ನಂತರ ೭ ನ್ಯಾಯ ಬೆಲೆ ಅಂಗಡಿಯವರಿಗೆ ಎಚ್ಚರಿಕೆಯ ನೋಟೀಸುಗಳನ್ನು ನೀಡಲಾಗಿದೆ ಮತ್ತು ೩ ನ್ಯಾಯ ಬೆಲೆ ಅಂಗಡಿಗಳ ಮೇಲಿನ ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.

ಶ್ರೀ ಕೆ. ಲಕ್ಕಣ್ಣ.— ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ನ್ಯಾಯ ಬೆಲೆ ಅಂಗಡಿಗಳಿಂದ ದಿನ ನಿತ್ಯದ ವಸ್ತುಗಳನ್ನು ಯಾರ್ಯಾರು ಕೊಡುತ್ತಾರೆ ಎಂದು ಕೇಳಿದ್ದೆ. ಖಾಸಗಿಯವರು ಮತ್ತು ಕೋ-ಆಪರೇಟಿವ್ ಸೊಸೈಟಿಯವರು ಸೇರಿ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ನಿಂದ ೨೧೦ ಅಂಗಡಿಗಳಿಗೆ ಅನುಮತಿ ಕೊಡಲಾಗಿದೆ ಎಂದು ಹೇಳಿದ್ದಾರೆ. ಬಹುತೇಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ಮತ್ತು ಸಹಕಾರದ ಇಲಾಖೆಯು ವಿತರಣೆ ಮಾಡತಕ್ಕಂಥ ನ್ಯಾಯಬೆಲೆ ಅಂಗಡಿಗಳಿಗ ನಾಗರೀಕರಿಗೆ ಸರಿಯಾದ ತೂಕದಲ್ಲಿ ಆಹಾರ ಪದಾರ್ಥಗಳನ್ನು ಕೊಡುತ್ತಾ ಇಲ್ಲ, ಎನ್ನತಕ್ಕಂಥ ದೂರು ಬಂದಿದೆ. ಆದರೆ ೨೧೦ ಅಂಗಡಿಗಳ ಪೈಕಿ ಕೇವಲ ೧೦ ಅಂಗಡಿಗಳ ಬಗ್ಗೆ ದೂರುಗಳು ಬಂದಿದ್ದು, ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಾ ಇದ್ದಾರೆ. ಬಹುತೇಕ ನ್ಯಾಯ ಬೆಲೆ ಅಂಗಡಿಗಳಲ್ಲಿ, ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಮತ್ತು ಸಹಕಾರ ಕ್ಷೇತ್ರದಿಂದ ಮಾಡುತ್ತಿರುವುದರಲ್ಲಿ ತೂಕಗಳು ಸರಿಯಾಗಿ ಬರುತ್ತಾ ಇಲ್ಲ, ಮತ್ತು ಸೀಮೆಎಣ್ಣೆ ಸರಿಯಾದ ರೀತಿಯಲ್ಲಿ ವಿತರಣೆ ವ್ಯವಸ್ಥೆ ಮಾಡದೇ ಇರುವುದರಿಂದ ನಮ್ಮ ಕ್ಷೇತ್ರದ ನಾಗರೀಕರಿಂದ ಬಹಳ ದೂರುಗಳು ಬಂದಿವೆ. ಆದುದರಿಂದ ಇದರ ಬಗ್ಗೆ ಮಾನ್ಯ ಮಂಂತ್ರಿಗಳು ಏನು ಹೇಳುತ್ತಾರೆಂದು ನಾನು ಕೇಳಬಯಸುತ್ತೇನೆ.

SRI AZEEZ SAIT.— Sir, I will take necessary action after an enquiry into the matter. Hon'ble member stated that even the Karnataka Food and Civil Supplies Corporation and co-operatives are also doing underhand dealings. Sir, I will look into it.

ಶ್ರೀ ಕೆ. ಲಕ್ಕಣ್ಣ.— ಸೀಮೆಎಣ್ಣೆ ವಿತರಣೆ ಬಗ್ಗೆ ಬಹಳ ದೂರುಗಳು ಬಂದಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

SRI AZEEZ SAIT.— I said I shall look into it.

ಶ್ರೀ ಎ. ಕೆ. ಆನಂತಕೃಷ್ಣ.— ಸೀಮೆಎಣ್ಣೆ ವಿಷಯದಲ್ಲಿ ಹೇಳುವುದಾದರೆ, ನಿನ್ನೆ ನನ್ನ ಕ್ಷೇತ್ರದಲ್ಲಿ ಹೋದಾಗ ನನಗೆ ಜನಗಳಿಂದ ತಡೆದುಕೊಳ್ಳಲಿಕ್ಕೆ ಆಗಲಿಲ್ಲ, ಆಷ್ಟು ತೊಂದರೆಯಾಗಿದೆ. ಸೀಮೆಎಣ್ಣೆ ವಿತರಣೆ ವಿಷಯದಲ್ಲಿ ಶಿವಾಜಿನಗರ ಕ್ಷೇತ್ರ, ಸಂಪಂಗಿರಾಮನಗರ ಕ್ಷೇತ್ರದ ಭಾಗದಲ್ಲಿ ಬಹಳ ತೊಂದರೆಯಾಗಿದೆ. ಅಲ್ಲಿನ ಫೇರ್‌ಪ್ರೈಸ್ ಶಾಪ್‌ಗಳಿಗೆ ಸೀಮೆಎಣ್ಣೆ ಸರಿಯಾಗಿ ಸಪ್ಲೈ ಮಾಡುತ್ತಾ ಇಲ್ಲ ಎಂಬ ದೂರು ಇದೆ.

SRI AZEEZ SAIT.—I will try and see how best I could rectify it.

SRI A. K. ANANTHA KRISHNA.— There is no proper inspection, supervision, control...

ಅಧ್ಯಕ್ಷರು.— ಅದನ್ನೇ ಅವರು ಹೇಳುತ್ತಾ ಇದ್ದಾರೆ, ಕಂಪ್ಲೈಂಟ್ಸ್ ಇದೆ ಎಂದು ಹೇಳುತ್ತಾ ಇದ್ದಾರೆ, I will see how best the things could be set right ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಸೀಮೆಎಣ್ಣೆ ಹಂಚಿಕೆಯಲ್ಲಿ ಇಡೀ ರಾಜ್ಯದಲ್ಲಿ ಜನ ಅತ್ಯಂತ ತೊಂದರೆಗೆ ಸಿಕ್ಕಿದ್ದಾರೆ. ಇದು ಯಾವುದೊ ಒಂದು ಕ್ಷೇತ್ರದ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿ ಜನರು ಸಮಗ್ರವಾಗಿ ತೊಂದರೆಗೆ ಸಿಕ್ಕಿದ್ದಾರೆ. ಆದ್ದರಿಂದ ಆದಷ್ಟು ಬೇಗ ಈ ತೊಂದರೆಯನ್ನು ಪರಿಹಾರ ಮಾಡುತ್ತೇವೆಂದು ಹೇಳಿದರೆ ಒಳ್ಳೆಯದು.

SRI AZEEZ SAIT.— I will do it.

ಶ್ರೀ ವಾಟಾಳ್ ನಾಗರಾಜ್.— ಅವರು ಇಂಗ್ಲೀಷಿನಲ್ಲಿ ಹೇಳಿದ್ದು ನನಗೆ ಅರ್ಥವಾಗಲಿಲ್ಲ.

SRI AZEEZ SAIT.— I have stated that I will do it.

ಶ್ರೀ ವಾಟಾಳ್ ನಾಗರಾಜ್.— ನಾನು ಕನ್ನಡದಲ್ಲಿ ಕೇಳುತ್ತಾ ಇದ್ದೇನೆ. ಅವರು ಇಂಗ್ಲೀಷಿನಲ್ಲಿ ಹೇಳಿದ್ದು ನನಗೇನು ಅರ್ಥವಾಗಲಿಲ್ಲ.

SRI AZEEZ SAIT.— You can come to my house. I will tell you.

ಶ್ರೀ ವಾಟಾಳ್ ನಾಗರಾಜ್.— ಸ್ನೇಹ ಎಷ್ಟು ಸಲಿಗೆ ತೆಗೆದುಕೊಳ್ಳುತ್ತದೆ ನೋಡಿ.

ಶ್ರೀ ಬಿ. ಶಿವರಾಮಂ.— ಸ್ವಾಮಿ, ವಾಟಾಳ್ ನಾಗರಾಜ್‌ರವರು ಹೇಳಿದ್ದಾದು ಸರಿಯಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಲೀಟರ್ ಸೀಮೆಎಣ್ಣೆ ೫ ರೂಪಾಯಿಗೂ ಸಿಗುತ್ತಿಲ್ಲ, ಎಲ್ಲಾ ಕಡೆ ಜನರೂ ಕ್ಯೂನಲ್ಲಿ ನಿಂತಿರುತ್ತಾರೆ. ಎಲ್ಲಾ ಕಡೆ ಇದರ ತೊಂದರೆ ಇದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

SRI AZEEZ SAIT.— As far as kerosene is concerned I have made all efforts to increase but on the contrary I think in the coming months what we are going to get that will be reduced.

ಶ್ರೀ ಬಿ. ಶಿವರಾಮಂ.— ಕೊನೆಯ ಪಕ್ಷ ತಾವು ಇರತಕ್ಕ ರೇಟಿಗೆ ಮಾರಾಟಮಾಡತಕ್ಕ ವ್ಯವಸ್ಥೆಯನ್ನಾದರೂ ಮಾಡಿ. ಅಧಿಕಾರಿಗಳು ಈ ಕಡೆ ಗಮನ ಕೊಡಲಿ.

ಶ್ರೀ ಅಜೀಜ್ ಸೇಟ್.— ಮಾಡುತ್ತೇನೆ.

ಅಧ್ಯಕ್ಷರು,— ಮಾನ್ಯ ಬಾಬುಗೌಡ ಪಾಟೀಲ್, ಸೋಮಪ್ಪ ಸುವರ್ಣ, ಕೋಳಿವಾಡ ವಿರ್ಗೆ, ರಾಜಾ ಅಮರೇಶ ನಾಯಕ್, (ಸದಸ್ಯರುಗಳು ಸಭೆಯಲ್ಲಿ ಹಾಜರಿರಲಿಲ್ಲ)

(ವಾಲ್ಯನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು)

ಶ್ರೀ ಎಂ. ವಿ. ಗುತ್ತೇಗಾರ್ (ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಶ್ರೀ ಬಿ. ಮೋತಕಪಲ್ಲಿ.— ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು.— ನೀವು ಮೋತಕಪಲ್ಲಿಯವರಲ್ಲವೇ?

ಶ್ರೀ ಡಿ. ಮಂಜುನಾಥ್.— ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ, ಇಂಥ ಪ್ರಾಮುಖ್ಯವಾದ ಪ್ರಶ್ನೆಗಳು ಬಂದಾಗ, ತಾವು ಅಪ್ಪಣೆ ಕೊಟ್ಟರೆ ನಾವು ಕೇಳುವುದಕ್ಕೆ ಅನುಕೂಲವಾಗುತ್ತದೆ. ಈ ಹಿಂದೆ ಇಂತಹ ಒಂದು ಪರಿಪಾಠ ಇತ್ತು. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ನನಗೆ ಎಲ್ಲವೂ ಪ್ರಾಮುಖ್ಯವೆ. ಇದು ಪ್ರಾಮುಖ್ಯ, ಅದು ಅಪ್ರಾಮುಖ್ಯ ಎಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ (ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು
ಹೇಮಾವತಿ ಎಡದಂಡೆ ನಾಲಾ ಕೆಲಸ

೧೯೯೨. ಶ್ರೀ ಎಸ್. ಶಫಿ ಅಹಮದ್ (ತುಮಕೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಹೇಮಾವತಿ ಎಡದಂಡೆ ನಾಲೆ ಕೆಲಸ ಪ್ರಸ್ತುತವಾಗಿ ಯಾವ ಹಂತದಲ್ಲಿದೆ ? ಹಾಗೂ ಭೂಗಸಂದ್ರ ಅವಾನಿಕೆರೆಗೆ ಯಾವಾಗ ತಲಪುವುದು ;

ಆ) ಈ ಕೆಲಸ ಯಾವಾಗ ಪೂರ್ಣಗೊಳ್ಳುವುದು ;

ಇ) ಈ ಬಗ್ಗೆ ಈವರೆಗೆ ವ್ಯಯ ಮಾಡಿರುವ ಮೊತ್ತ ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೇಮಾವತಿ ಎಡದಂಡೆ ನಾಲೆಯು, ತುಮಕೂರು ಉಪ ನಾಲೆಯು ಪಂಕ್ತಿಕಿರಣ ೧೨೬ನೇ ಕಿ. ಮೀ. ನಲ್ಲಿ ಭುಗುಡನಹಳ್ಳಿ ಅವಾನಿಕೆರೆ ಸಮೀಪ ಹಾಯುವುದು. ತುಮಕೂರು ಉಪ ನಾಲೆಯ ಕೆಲಸಗಳು ವಿವಿಧ ಹಂತದಲ್ಲಿದ್ದು, ೧೯೯೨ನೇ ಸಾಲಿನ ಅಂತ್ಯದಲ್ಲಿ ಈ ಭಾಗದವರೆಗೂ ನಾಲೆಯ ಕೆಲಸ ಗಳನ್ನು ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ೧೯೯೨ನೇ ಸಾಲಿನ ಅಂತ್ಯದ ವೇಳೆಗೆ ಹಣದ ಸಂಪನ್ಮೂಲವನ್ನನುಸರಿಸಿ, ಪೂರ್ಣಗೊಳಿಸುವ ಉದ್ದೇಶವಿದೆ.

ಇ) ತುಮಕೂರು ಉಪ ನಾಲೆಯ ಕಾಮಗಾರಿಗಳಿಗಾಗಿ ಮೇ ೯೦ರ ಅಂತ್ಯದವರೆಗೆ ೧೩೮.೭೨ ಕೋಟಿ ರೂ. ಗಳಷ್ಟು ವ್ಯಯವಾಗಿದೆ.